ಆ) ರಾಜ್ಯಕ್ಕೆ ಗಡಿನಾಡುಗಳಿಂದ ಬರುವ ಕನ್ನಡ ಪ್ರವಾಸಿ ವಿದ್ಯಾರ್ಥಿಗಳಿಗೆ ವಿಧಿಸುತ್ತಿರುವ ಶುಲ್ಕವನ್ನು ರದ್ದುಪಡಿಸಿ ಕನ್ನಡ ಅಭಿಮಾನವನ್ನು ವ್ಯಕ್ತಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಕಾಸರಗೋಡು ಪ್ರದೇಶದಲ್ಲಿ ಸುಮಾರು 200ಕ್ಕೂ ಹೆಚ್ಚು ಕನ್ನಡ ಶಾಲೆಗಳಿದ್ದು, ಅಲ್ಲಿನ ಕನ್ನಡ ವಿದ್ಯಾರ್ಥಿಗಳು ತಮ್ಮ ಮೂಲ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವಾಸಿಗಳಾಗಿ ಬರುವಾಗ ಶುಲ್ಕ ವಿಧಿಸಬಾರದೆಂಬ ಅವರ ವಿಜ್ಞಾಪನೆಯನ್ನು ಸರ್ಕಾರ ಒಪ್ಪುವುದೇ?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) 1) ಏಳು ದಿನಗಳ ಅವಧಿಗೆ ರೂ. 10/-

2) ಮೂವತ್ತು ದಿನಗಳ ಅವಧಿಗೆ ರೂ. 30/-

2005-06ನೇ ಸಾಲಿನಲ್ಲಿ ತೆರಿಗೆಯಾಗಿ ರೂ. 2870/-.

ಆ) ಪರಿಶೀಲನೆಯಲ್ಲಿದೆ.

ಇ) ಏಳು ದಿನಗಳವರೆಗೆ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

712(957) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಹಾನಗರ ಪಾಲಿಕೆ ವ್ಯಾಪ್ತಿಯ ಸರಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ್ತವ್ಯವಿರುವ ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿನ ಫಲಾನುಭವಿಗಳಿಗೆ ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರಗಳು ನಿಗದಿಪಡಿಸುತ್ತಿರುವ ಮೌಲ್ಯವು ಮಾರುಕಟ್ಟೆ ಬೆಲೆಗಿಂತ ದುಪ್ಪಟ್ಟು ಎಂಬುದನ್ನು ಸರಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ, ದರನಿಗಧಿಗೆ ಅನುಸರಿಸಲಾಗುತ್ತಿರುವ ಮಾನದಂಡಗಳೇನು; ಅಭಿವೃದ್ಧಿ ಪಡಿಸದ ಜಾಗಗಳಿಗೂ ಅದೇ ದರವನ್ನು ನಿಗಧಿಪಡಿಸಿದಲ್ಲಿ ಅದು ನ್ಯಾಯಸಮ್ಮತವೆ;

ಇ) ಅವೈಜ್ಞಾನಿಕ ದರನಿಗಧಿ ಇಂದಾಗಿ ಅಕ್ರಮ-ಸಕ್ರಮದ ಫಲಾನುಭವಿಗಳೂ ನಿವೇಶನ ಮೌಲ್ಯ ಪಾವತಿಸದೆ, ಹಕ್ಕುಪತ್ರವನ್ನು ಪಡೆಯಲಾಗದೆ ಸರಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಅನರ್ಹರಾಗಿರುವುದನ್ನು ತಪ್ಪಿಸಲು ನಿಯಮಗಳಿಗೆ ತಿದ್ದುಪಡಿ ತಂದು ಅನುಕೂಲ ಮಾಡಿಕೊಡುವರೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಇಲ್ಲ.

ಆ) ಕರ್ನಾಟಕ ಸ್ವಾಧೀನ ಪಡಿಸಿಕೊಂಡಿರುವ ಭೂಮಿಯಲ್ಲಿನ ವಾಸದ ಮನೆಗಳ ನಿರ್ಮಾಣದ ಸಂದರ್ಭದಲ್ಲಿ ಭೂ ಮಂಜೂರಾತಿ ನಿಯಮಗಳು 1999ರಲ್ಲಿ ನಗರ ಪ್ರದೇಶದಲ್ಲಿ

20'X30' ಮತ್ತು ಗ್ರಾಮೀಣ ಪ್ರದೇಶದಲ್ಲಿ 30'X40' ಅಳತೆಯ ನಿವೇಶನಗಳಿಗೆ ಸಂಬಂಧಿಸಿದಂತೆ ಆರ್ಥಿಕವಾಗಿ ದುರ್ಬಲವಾದ ವರ್ಗಕ್ಕೆ ಸೇರಿದ ವ್ಯಕ್ತಿಗಳು ಯಾವುದೇ ಮೊಬಲಗನ್ನು ಸಂದಾಯ ಮಾಡತಕ್ಕುದಲ್ಲ ಮತ್ತು ನಗರ ಪ್ರದೇಶದಲ್ಲಿ 20'X30' ಈ ಅಳತೆಗೆ ಮೀರಿದ ಭೂಮಿಯನ್ನು ಅವರಿಗೆ ಮಂಜೂರುಮಾಡುವ ಸಂದರ್ಭದಲ್ಲಿ ಅವರು ನಿರ್ದಿಷ್ಟ ಮೊತ್ತದ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಎಂಬ ತಿದ್ದುಪಡಿಯನ್ನು ಸರ್ಕಾರವು ದಿ: 26.08.05ರ ಅಧಿಸೂಚನೆ ಮೂಲಕ ಮಾಡಿದೆ.

ಇ) ಈ ಮೇಲೆ ತಿಳಿಸಿದ ನಿಯಮಗಳ ತಿದ್ದುಪಡಿಯಂತೆ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದ ಅಕ್ರಮ ಸಕ್ರಮ ಫಲಾನುಭವಿಗಳಿಗೆ ಹಕ್ಕು ಪತ್ರವನ್ನು ಪಡೆಯಲು ಅನುಕೂಲವಾಗಿದೆ.

714(1158) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತುಂಬಾ ಹಾಳಾಗಿರುವ ಲೋಕೋಪಯೋಗಿ ಇಲಾಖೆ ರಸ್ತೆಗಳ ದುರಸ್ತಿಗಾಗಿ ಸರ್ಕಾರದ ಕ್ರಮಗಳೇನು (ವಿವರ ನೀಡುವುದು)

ಆ) ಎಲ್‌ಓಸಿ ನೀಡುವ ಬಗ್ಗೆ ಕಡೂರು ಕ್ಷೇತ್ರದ ಗುತ್ತಿಗೆದಾರರಿಗೆ ತಾರತಮ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಮಳೆಹಾನಿಯಿಂದ ಹಾಳಾದ ರಸ್ತೆಗಳ ದುರಸ್ತಿ ಕಾಮಗಾರಿಯನ್ನು ಹಾಗೂ ರಸ್ತೆಯ ಸ್ಥಿತಿಗನುಸಾರ ಗುಂಡಿ ಮುಚ್ಚುವುದು, ರಸ್ತೆ ಬಲಪಡಿಸುವುದು, ಅಡ್ಡಮೋರಿಗಳ ದುರಸ್ತಿ ಮತ್ತು ಅಭಿವೃದ್ಧಿಪಡಿಸುವುದು, ಮರುನಿರ್ಮಾಣ ಇತರೆ ಕೆಲಸಗಳನ್ನು ಅವಶ್ಯಕತೆಗನುಗುಣವಾಗಿ ನಿಗಧಿತ ಕಾಲಾವಧಿಯಲ್ಲಿ ಇಲಾಖಾ ನಿಯಮಾವಳಿಯ ಅನುಸಾರ ಕಾರ್ಯಗತಗೊಳಿಸಲಾಗುತ್ತಿದೆ. ಅದರಂತೆ ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2005–06ನೇ ಸಾಲಿನಲ್ಲಿ ಮಳೆಹಾನಿ ಕಾಮಗಾರಿ ಪರಿಹಾರ ನಿಧಿ ಅಡಿಯಲ್ಲಿ 33 ಕೆಲಸಗಳನ್ನು 56.00 ಲಕ್ಷ ರೂ.ಗಳಿಗೆ ಲೆಕ್ಕ ಶೀರ್ಷಿಕೆ 3054 ರಸ್ತೆ ಮತ್ತು ಸೇತುವೆ (ಯೋಜನೆ) ಅಡಿಯಲ್ಲಿ 87 ಕೆಲಸಗಳನ್ನು 198.00 ಲಕ್ಷ ರೂ.ಗಳಿಗೆ, ಲೆಕ್ಕ ಶೀರ್ಷಿಕೆ 5054 ರಸ್ತೆ ಮತ್ತು ಸೇತುವೆ ಅಡಿಯಲ್ಲಿ, 2 ಕೆಲಸಗಳನ್ನು 30.00 ಲಕ್ಷ ರೂ.ಗಳಿಗೆ, ಒಟ್ಟು 284.00 ಲಕ್ಷ ರೂ.ಗಳ